## ಮಾಂಗಲ್ಯಂ ತಂತುನಾನೇನ ಮಮ ಜೀವನಂ...

'ಗಟ್ಟಿ ಮೇಳ, ಫೋಟೊಗ್ರಾಫರ್ ರೆಡಿನಾ, ಗೋಪಾಲ ಭಟ್ರೆ ಕಟ್ಟಿ ಬಿಡಿ ಮಾಂಗಲ್ಯ, ಮುಹೂರ್ತ ತಪ್ಪಿ ಹೊತ್ತು' ಎನ್ನುತ್ತ ಗಡಿಬಿಡಿ ಮಾಡತೊಡಗಿದರು ಮದುವೆಯ ಪುರೋಹಿತ ನರಸಿಂಹ ಭಟ್ಟರು.

ಮದುಮಗಳು ಸುಕನ್ಯಾಳ ಕಣ್ಣು, ಮುಖ ನೆಲ ನೋಡುತಿದ್ದರೆ, ತಲೆ ತುಂಬ ಮುಡಿದ ಮಲ್ಲಿಗೆ, ಜಾಜಿ ಹೂವುಗಳು ನಡೆಯುವ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ತಲೆ ಎತ್ತಿ ನಿಂತಿದ್ದವು. ಇಷ್ಟರಲ್ಲಿಯೇ ನೂರು ಮದುವೆಯನ್ನಾದರೂ ಮಾಡಿಸಿದ ವರ ಗೋಪಾಲ ಭಟ್ಟರು ಮಾತ್ರ ತಮ್ಮ ಸ್ವಂತ ಮದುವೆಯಲ್ಲಿ ವಧು ಸುಕನ್ಯಾಳಿಗೆ ಕರಿಮಣಿ ಕಟ್ಟುವಾಗ ಕೈನಡುಗುತಿತ್ತು. ಇದನ್ನು ಕಂಡು ಸುತ್ತ ನೆರೆದಿರುವ ಮುತ್ತೈದೆಯರು ಒಬ್ಬರನ್ನೊಬ್ಬರು ಕಂಡು ಮುಸಿ ಮುಸಿ ನಕ್ಕರು.

ಕರಿಮಣಿ ಕುತ್ತಿಗೆಗೆ ಬೀಳುತ್ತಿದ್ದಂತೆ ಕತ್ತೆತ್ತಿದ ಸುಕನ್ಯಾ ಎದುರಿನಲ್ಲಿ ನಿಂತ ವರ ಗೋಪಾಲನನ್ನು ಕಂಡು ಕಣ್ಣುಗಳು ತುಂಬಿ ಕಣ್ಣೀರು ಕೆನ್ನೆಯ ಮೇಲೆ ಉರುಳಿತು. ಕುತ್ತಿಗೆಯಲ್ಲಿ ಆಗ ತಾನೇ ಕಟ್ಟಿದ ಕರಿಮಣಿ ಕುತ್ತಿಗೆ ಬಿಗಿದು ಉರುಳಿನಂತೆ ಕಂಡಿತು. ಸುಕನ್ಯಾಳ ಕಣ್ಣೀರು ಕಂಡ ಗೋಪಾಲ ಭಟ್ಟರ ಕಾಲುಗಳು ನಿಂತಲ್ಲಿಯೇ ನಡುಗಿತು.

ಅಗ್ನಿಕುಂಡದ ಸುತ್ತ ನಾಣ್ಯಗಳನ್ನಿಡುತ್ತ ಪುರೋಹಿತ ನರಸಿಂಹ ಭಟ್ಟರು 'ಗೋಪಾಲ ಭಟ್ರೇ ಇನ್ನ ಸಪ್ತಪದಿ ಶಾಸ್ತ್ರ ನಡಿಲಿ, ನಿಮಗೆ ಎಲ್ಲ ಗೊತ್ತಿತಲೆ, ಹೇಳಿಕೊಡುದ ಎಂತ ಇಲ್ಯಲೆ' ಎಂದರು. ಗೋಪಾಲ ಭಟ್ಟರು ಸುಕನ್ಯಾಳ ಕೈ ಹಿಡಿದು ಮಂತ್ರವನ್ನುಚ್ಚರಿಸುತ್ತ ಒಂದೊಂದೇ ನಾಣ್ಯವನ್ನು ತುಳಿಯುತ್ತಿದ್ದಂತೆ ಸುಕನ್ಯಾಳ ಮನ ಪ್ರತಿ ಕ್ಷಣವೂ ವೈಭವನನ್ನು ನೆನೆಯುತಿತ್ತು. ಮದುವೆಯ ಮುಂದಿನ ಕಾರ್ಯಕ್ರಮವೆಲ್ಲ ಯಾಂತ್ರಿಕವಾಗಿ ನಡೆಯಿತು. ಮದುವೆಯಲ್ಲಿ ಒಂದಾಗ ಬೇಕಿದ್ದ ಮನಸ್ಸುಗಳೆರಡು ವಿರುದ್ಧ ದಿಕ್ಕಿನಲ್ಲಿ ಓಡಿದವು. ಸುಕನ್ಯಾಳಿಗಿದು ಎರಡನೇಯ ಮದುವೆ, ಮೊದಲು ವೈಭವನನ್ನು ಮದುವೆಯಾಗಿದ್ದರೂ ಮದುವೆ ರಿಜಿಸ್ಟರ್ ಆಫೀಸಿನಲ್ಲಾಗಿದ್ದು, ಮದುವೆ ರೀತಿ ರಿವಾಜಿನಿಂದ ದೂರ ಉಳಿದಿತ್ತು.

****

ಸುಕನ್ಯಾ ವೈಭವನನ್ನು ಮೊದಲು ನೋಡಿದ್ದು ಪೂನಾದ ಆಫೀಸಿನಲ್ಲಿ, ಸುಕನ್ಯಾ ಕಂಪ್ಯೂಟರ್ ಇಂಜಿನಿಯರಿಂಗ್ ಮುಗಿಸಿದ್ದು ಬೆಂಗಳೂರಿನಲ್ಲಿ. ಓದು ಮುಗಿಯುತ್ತಿದ್ದಂತೆ, ಸಾಫ್ಟ್‌ವೇರ ಕಂಪೆನಿಯೊಂದರಲ್ಲಿ ಕೆಲಸ ಸಿಕ್ಕಿ, ಮೈಸೂರಿನಲ್ಲಿ ಟ್ರೈನಿಂಗ್ ಮುಗಿಸಿ ಸೇರಿದ್ದು ಪೂನಾ ಸಿಟಿ. ಹೊಸ ಊರು, ಹೊಸ ಜನವನ್ನು ಹೊಂದಿಕೊಳ್ಳುವ ಕಷ್ಟ ಒಂದು ಕಡೆಯಾದರೆ, ಅಮ್ಮ, ಅಪ್ಪನನ್ನು ಬಿಟ್ಟಿರುವ ಕಷ್ಟ ಬೇರೆ. ಸ್ವಂತ ಅಡಿಗೆ ಮಾಡಿ ಊಟ ಮಾಡುವ ದುರ್ಗತಿ ಬೇರೆ. ಆಫೀಸಿನಲ್ಲಿ ಟೀಮ್ ಮ್ಯಾನೇಜರ್ ಮಹರಾಷ್ಟದ ವೈಭವ ಎಲ್ಲರನ್ನು ನಕ್ಕು ನಗಿಸಿ ಎಲ್ಲರಿಂದ ಕೆಲಸ ತೆಗೆದುಕೊಳ್ಳುವ ಪರಿ ಎಲ್ಲರನ್ನು ಆಕರ್ಷಿಸುತಿತ್ತು.

ಕೆಲಸಕ್ಕೆ ಸೇರಿ ಆರು ತಿಂಗಳೊಳಗೆ ಸುಕನ್ಯಾಳ ದೊಡ್ಡ ಕಣ್ಣುಗಳಲ್ಲಿ ವೈಭವ ಕಣ್ಣಿಟ್ಟು ನೋಡತೊಡಗಿದರೆ, ಸುಕನ್ಯಾ ವೈಭವನ ಮಾತಿನ ಮೋಡಿಗೆ ಮರುಳಾಗಿ ಮೈ ಮರೆತು ಬಿಡುತ್ತಿದ್ದಳು. ಮುಂದಿನ ಆರು ತಿಂಗಳಲ್ಲಿ ವೈಭವ ಸುಕನ್ಯಾರ ಜೋಡಿ ಒಬ್ಬರನ್ನೊಬ್ಬರು ಬಿಟ್ಟಿರಲಾರದ ಹಂತಕ್ಕೆ ತಲುಪಿತು. ಸಂಪ್ರದಾಯ ಬ್ರಾಹ್ಮಣ ಮನೆತನದ ಸುಕನ್ಯಾಳ ಅಪ್ಪ ಅಮ್ಮ ಮುಕುಂದ ರಾಯರು ಮತ್ತು ಕಾವೇರಿಯಮ್ಮ ವೈಭವನನ್ನು ಅಳಿಯನಾಗಿ ಸ್ವೀಕರಿಸಲು ತಡ ಮಾಡಿದರು. ಆಗ ಒಬ್ಬರನ್ನೊಬ್ಬರು ಬಿಟ್ಟಿರಲಾಗದ ಸುಕನ್ಯಾ ಮತ್ತು ವೈಭವ ರಿಜಿಸ್ಟರ್ ಮದುವೆಯಾಗಿ ಪೂನಾದಲ್ಲಿ ಮನೆ ಮಾಡಿದರು. ಸುಕನ್ಯಾ ಮತ್ತು ವೈಭವನ ಪ್ರೇಮಕ್ಕೆ ಮುದ್ರೆಯೊತ್ತಿದಂತೆ ಸುಕನ್ಯಾ ಬಸುರಿಯಾದಳು. ಊಟ ತಿಂಡಿ ನೋಡುತ್ತಿದ್ದಂತೆ ವಾಂತಿ ಮಾಡತೊಡಗಿದಾಗ ತಡೆಯಲಾರದೆ ಸುಕನ್ಯಾ ಅಮ್ಮನಿಗೆ ಫೋನ್ ಮಾಡಿ 'ಅಮ್ಮ ನೀ ಅಜ್ಜಿ ಆತ ಇದ್ದಿ, ನಂಗೆ ಒಂಚೂರು ಊಟ ಸೇರುತ್ತಿಲ್ಲ, ಎಂತ ಮಾಡುಕೂ ಎಡಿತ್ತಿಲ್ಲ' ಎಂದು ಗೋಳಿಟ್ಟಾಗ, ತಡೆಯಲಾರದೆ ಅಮ್ಮ ಅಪ್ಪನೊಡನೆ ಪೂನಾ ಸೇರಿದರು.

ಅಪ್ಪ, ಅಮ್ಮ ಮತ್ತು ವೈಭವನ ಪ್ರೀತಿಯಲ್ಲಿ ತೇಲಾಡಿದ ಸುಕನ್ಯಾ ಮುದ್ದಾದ ಮಗಳು 'ಅಮ್ಮು'ವಿನ ತಾಯಿಯಾದಳು. ಮತ್ತೆರಡು ವರ್ಷದಲ್ಲಿ ಅಮ್ಮುವಿಗೆ ತಮ್ಮ ಹುಟ್ಟಿದ. ಕೆಲವೊಮ್ಮೆ ದೇವರಿಗೇ ಕೆಲವರ ಸಂತೋಷ ಕಂಡು ಹೊಟ್ಟೆಕಿಚ್ಚು ಬರುತ್ತದೆಂದು ಕಾಣಿಸುತ್ತದೆ. ಅದಕ್ಕಾಗಿ ದೇವರು ತಾನೇ ಕೊಟ್ಟದ್ದನ್ನು ಕಸಿದುಕೊಳ್ಳುತ್ತಾನೆ. ಪೂನಾದಿಂದ ಧರ್ಮಸ್ಥಳಕ್ಕೆ ಕಾರಲ್ಲಿ ಹೊರಟ ಸುಕನ್ಯಾಳ ಪುಟ್ಟ ಸಂಸಾರ ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಟ್ಯಾಂಕರಿಗೆ ಬಡಿದು ಚಿಕ್ಕ ಮಗು ಸ್ಥಳದಲ್ಲಿಯೇ ಮರಣ ಹೊಂದಿದರೆ ವೈಭವ ಆಸ್ಪತ್ರೆಯ ದಾರಿಯಲ್ಲಿ ಬಾರದ ಲೋಕಕ್ಕೆ ಹೊರಟ. ಅಮ್ಮು ಮತ್ತು ಸುಕನ್ಯಾ ದೈಹಿಕವಾಗಿ ಆರೋಗ್ಯವಾಗಿದ್ದರೂ, ಸುಕನ್ಯಾ ಮಾನಸಿಕವಾಗಿ ಅರೆ ಹುಚ್ಚಿಯಾದಳು. ಪೂನಾದ ಆಫೀಸಿನವರು ಸುಕನ್ಯಾಳನ್ನು ಬೆಂಗಳೂರಿನ ಆಫೀಸಿಗೆ ವರ್ಗ ಮಾಡಿದರು. ಯಂತ್ರದಂತೆ ದಿನ ದೂಡುವ ಸುಕನ್ಯಾಳನ್ನು ನೋಡಿ ಅಪ್ಪ ಮತ್ತು ಅಮ್ಮನಿಗೆ ದುಃಖ ತಡೆಯಲಾಗದೆ ಸುಕನ್ಯಾಳನ್ನು ಮರು ಮದುವೆಯಾಗೆಂದು ಒತ್ತಾಯಿಸ ತೊಡಗಿದರು.

' ನಿಂಗಿನ್ನೂ ವರ್ಷ 28 ವರ್ಷ ಅಷ್ಟೇ, ನಿನ್ನ ವಯಸ್ಸಿನ ಹೆಚ್ಚಿನವ್ರಿಗೆ ಇನ್ನೂ ಮದುವೆಯೇ ಆಗಲಿಲ್ಲ. ನೀ ಹುಂ ಅಂದ್ರೆ ಸಾಲಾಗಿ ಹುಡಗ್ರ ಬತ್ರ, ಹೇಂಗೂ ಈಗ ಹುಡಗಿಯರ ಸಂಖ್ಯೆ ಕಡಿಮೆ ಇದ್ದು', ಈ ಸಲ ಮಾತ್ರ ನಾವ ಸಮ ಮಾಡಿ ಜಾತ್ಕ ಕಂಡೇ ಮದುವೆ ಮಾಡುವ, ವೈಭವನ ಜಾತ್ಕವೇ ಸಮ ಇಲ್ಲ ಬಹುಶಃ, ಅಲ್ಪಾಯುಷ್ಯ ಬರೆದಿತ್ತೊ ಏನೋ. ನಿಂಗ ಅಲ್ಲದಿದ್ದರೂ, ನಿನ್ನ ಮಗಳಿಗೆ ಅಪ್ಪ ಬೇಕು, ಇನ್ನ ನೀ ಮಡುವೆಗೆ ಒಪ್ಪದಿದ್ದರೆ ನಾವ್ಯಾರು ಊಟ ಮಾಡ್ತಿಲ್ಲೆ' ಎನ್ನುತ್ತ ಮನೆಯಲ್ಲಿ ಮುಷ್ಕರ ಹೂಡಿದರು. ಸುಕನ್ಯಾಳಿಗೆ ಬೇರೆ ಉಪಾಯವಿಲ್ಲದೆ 'ಹೂಂ' ಎಂದಳು.

ಸುಕನ್ಯ ಹೂಂ ಎನ್ನುತ್ತಿದ್ದಂತೆ ರಾಯರು ಸುಕನ್ಯಾಳ ಜಾತಕ ಹಿಡಿದುಕೊಂಡು ಊರಿನ ಪ್ರಸಿದ್ಧ ಜೋತಿಷಿ ಕೆದ್ಲಾಯರಲ್ಲಿಗೆ ಹೊರಟೇ ಬಿಟ್ಟರು. ಕೆದ್ಲಾಯರು ಸುಕನ್ಯಾಳ ಜಾತಕವನ್ನು ಪರಿಶೀಲಿಸುತ್ತಾ 'ರಾಯರೇ ನಿಮ್ಮ ಮಗಳ ಜಾತಕವೂ ಒಳ್ಳೇದೇ, ವಯಸ್ಸೂ ಹೆಚ್ಚು ಆಯಿಲ್ಲೆ, ಎರಡು ಮದುವೆ ಅಪ್ಪ ಯೋಗ ಇದ್ದು' ಎಂದು ಭರವಸೆಯ ಉತ್ತರವಿತ್ತರು.

ಕೆದ್ಲಯಾರು ಹೇಳಿದಂತೆ ಹಲವು ಸಂಬಂಧಗಳೇನೋ ಹತ್ತಿರ ಬಂದವು. ಎಲ್ಲವೂ ಎರಡನೆ, ಮೂರನೆ ಸಂಬಂಧವಾಗಿದ್ದು, ಹುಡುಗನ ಪ್ರಾಯ ನಲವತ್ತಕ್ಕಿಂತ ಜಾಸ್ತಿಯಾಗಿತ್ತು. ಯಾವುದೂ ರಾಯರ ಮನಸ್ಸಿಗೆ ಹಿಡಿಸಲಿಲ್ಲ. ಮೂವತ್ತು, ಮೂವತ್ತೈದು ಪ್ರಾಯದ ಹುಡುಗರಿಗೆ ಕೈತುಂಬ ಸಂಬಳ ತರುವ ಇಂಜಿನಿಯರ್ ಸುಕನ್ಯಾ ಇಷ್ಟವಾಗಿದ್ದರೂ, ಮೊದಲನೆಯ ಮದುವೆಯಿಂದ ಒಂದು ಹೆಣ್ಣು ಮಗುವಿರುವುದು ಇಷ್ಟವಾಗದೆ ದೂರ ಸರಿಯುತಿದ್ದರು. ಹೀಗೆ ವೈಭವ ಸತ್ತು ಎರಡು ವರ್ಷವಾದರೂ ಯಾವ ಸಂಬಂಧವೂ ಕೂಡಿ ಬರಲಿಲ್ಲ.

ನಡೆಯುತ್ತಿರುವುದೆಲ್ಲ ತನಗೇನೂ ಸಂಬಂಧವಿಲ್ಲವೆಂಬಂತೆ ತಾನಾಯಿತು, ತನ್ನ ಆಫೀಸಾಯಿತು ಎನ್ನವಂತಿದ್ದಳು ಸುಕನ್ಯಾ. ಮಗಳು ಅಮ್ಮುವನ್ನೂ ಹೆಚ್ಚು ಹಚ್ಚಿಕೊಂಡಿರಲಿಲ್ಲ. ನಗುವನ್ನೂ ಮರೆತಿದ್ದಳು. ಯಾವುದಕ್ಕೂ ಒಳ್ಳೆ ಗಳಿಗೆ ಬರಬೇಕು, ಕಾಲ ಕೂಡಿ ಬರಬೇಕು ಎನ್ನುತ್ತಾರಲ್ಲ ಹಾಗೆ ಸುಕನ್ಯಾಳ ಜೀವನದಲ್ಲೂ ಶುಭ ಗಳಿಗೆ ಹತ್ತಿರ ಬರುವಂತಿತ್ತು. ಮಳೆಗಾಲದ ಒಂದು ಸಂಜೆ ಕೆದ್ಲಾಯರು ಗೋಪಾಲ ಭಟ್ಟರ ಜಾತಕ ಮತ್ತು ಫೋಟೊದೊಂದಿಗೆ ಬಂದರು.

'ರಾಯರೇ ಇಲ್ನೋಡಿ ಇದು ಗೋಪಾಲನ ಜಾತಕ, ಸುಕನ್ಯಳ ಜಾತಕದೊಡನೆ ಶೇ.70 ಹೊಂದಿಕೆಯಾಗುತ್ತದೆ, ಹುಡುಗನೂ ನೋಡಲು ಲಕ್ಷಣವಾಗಿ ಸುಕನ್ಯಾಳಿಗೆ ಹೇಳಿ ಮಾಡಿಸಿದಂತಿದ್ದಾನೆ. ವಯಸ್ಸು ಸುಮಾರು ಮೂವತ್ತೈದು. ಎಲ್ಲದಕ್ಕಿಂತ ಹುಡಗನಿಗೆ ಇದು ಮೊದಲನೆಯ ಮದುವೆ' ಎನ್ನುತ್ತಾ ಗೋಪಾಲನ ಫೋಟೊ ರಾಯರ ಮುಂದಿಟ್ಟಾಗ, ಎಲ್ಲಾ ತರಹದಲ್ಲೂ ಸುಕನ್ಯಾಳಿಗೆ ಸರಿ ಹೊಂದುವಂತಿದ್ದ ಗೋಪಾಲನ ವಿಷಯ ಕೇಳಿ ಸಂತೋಷಗೊಂಡರು ಯಾರು. ಇವರನ್ನು ನೋಡುತ್ತ ಕೆದ್ಲಾಯರು ಮೆಲ್ಲನೆಂದರು– 'ರಾಯರೇ ಒಂದು ವಿಷಯ ಗೋಪಾಲ ಹೆಚ್ಚು ಓದಿಲ್ಲ, ಎಸ್‌ಎಸ್‌ಎಲ್‌ಸಿ ವರೆಗೆ ಮಾತ್ರ ಓದಿ ಅಪ್ಪನ ಪುರೋಹಿತಿಗೆಯನ್ನು ಮುಂದುವರಿಸುತ್ತಿದ್ದಾನೆ. ನಾಲ್ಕು ವೇದಗಳಲ್ಲಿಯೂ ಪಾರಂಗತನಾಗಿ ಮದುವೆಯಿರಲಿ, ಮುಂಜಿಯಿರಲಿ, ಶ್ರಾದ್ಧವಿರಲಿ ಎಲ್ಲಿಯೂ ತಪ್ಪಿಲ್ಲದಂತೆ ಶ್ರದ್ಧೆಯಿಂದ ನಡೆಸುತ್ತಾನೆ' ಎಂದಾಗ, ರಾಯರು ಗಾಬರಿಯಾದರು.

'ಎಲ್ಲ ಸರಿ ಹುಡುಗ ಹೆಚ್ಚು ಓದಿದವನಲ್ಲ, ನನ್ನ ಮಗಳೊ ತಿಂಗಳಿಗೆ ಲಕ್ಷ ರೂಪಾಯಿ ಸಂಬಳ ತರುವ ಸಾಫ್ಟ್‌ವೇರ್ ಇಂಜಿನಿಯರ್. ಅವನೋ ಒಂದು ಡಿಗ್ರಿಯಿಯೂ ಇರದ ಪುರೋಹಿತ. ಈ ಸಂಬಂಧ ನಮಗೆ ಹೇಳಿಸಿದ್ದಲ್ಲ' ಎಂದರು. ಕೆದ್ಲಾಯರು ಬಂದಂತೆಯೇ ವಾಪಸ್ಸಾದರು. ಮತ್ತಾರು ತಿಂಗಳು